ಕನ್ನಡದ ಕಥಾಜಗತ್ತನ್ನು ವಿಸ್ತರಿಸಿದ ಕಥೆಗಾರರ ಕಥೆ ಬರೆಯುವ ಕಸುಬಿನ ಕುರಿತಾದ ಮಾಲಿಕೆ – 'ನನ್ನ ಕಥಾಪ್ರಸಂಗ'. ಕಥಾಯಾನದ ಖುಷಿ, ಸಂಕಟ, ಆ ಪ್ರಕಾರದ ಕುರಿತಾದ ವ್ಯಾಮೋಹ, ಸವಾಲು, ಮಾಂತ್ರಿಕತೆ, ಅದರಿಂದ ಆಗುವ ಬಿಡುಗಡೆ – ಇವೆಲ್ಲ ಅನುಭವಗಳನ್ನು ಒಳಗೊಳ್ಳಲಿರುವ ಈ ಮಾಲಿಕೆಗೆ ಬಹುಕಾಲದಿಂದ ಕಥೆಗಳನ್ನು ಬರೆದುಕೊಂಡು ಬಂದ ಕಥೆಗಾರರು ಬರೆಯುತ್ತ ಬಂದಿದ್ದಾರೆ. ಕಥೆಯ ನಿರೂಪಣಾ ವಿಧಾನದ ಕುರಿತ ಕಥೆಗಾರರ ಸ್ವಅನುಭವ 'ಮಯೂರ'ದ ಈ ಪುಟಗಳಲ್ಲಿದೆ

ನಮ್ಮ ಅಜ್ಜಿಗೆ ಜಾಹೀರಾತಿನ ಚಿತ್ರದ ಹಾಳೆಗಳು, ತಗಡಿನ ಕರಡಿಗೆಗಳು, ರಟ್ಟಿನ ಪುಟ್ಟ ಡಬ್ಬಿಗಳು – ಇಂತಹ ವಸ್ತುಗಳಲ್ಲಿ ಆಸಕ್ತಿ. ಒಂದು ಸಣ್ಣ ಊರಿನ ದೊಡ್ಡ ಮನೆತನದಲ್ಲಿ ಬದುಕಿ ಬಾಳಿದ್ದ ಅವಳಿಗೆ ಬೇಕುಬೇಕಾದ ಸಂಪತ್ತು ಇತ್ತಾದರೂ, ಅವಳೊಬ್ಬ ಸರಳ ಭಾವಜೀವಿ. ನಮ್ಮ ತಂದೆ ಡಾಕ್ಟರಾಗಿದ್ದುದರಿಂದ ನಮ್ಮಲ್ಲಿ ಔಷಧಿಗಳ ಬಣ್ಣಬಣ್ಣದ ಜಾಹೀರಾತುಗಳಿರುತ್ತಿದ್ದ ದಪ್ಪ ಪಾರದರ್ಶಕ ಪ್ಲಾಸ್ಟಿಕ್ ಹಾಳೆಗಳೂ, (ಮಸಿ ಹೀರುವ) ಬ್ಲೋಟಿಂಗ್ ಕಾಗದಗಳೂ ಬರುತ್ತಿದ್ದವು. ನಾವು ಅವನ್ನೆಲ್ಲ ಒಟ್ಟುಮಾಡಿಟ್ಟು ರಜೆಯಲ್ಲಿ ಅಜ್ಜಿ ಮನೆಗೆ ಹೋದಾಗ ಅವಳಿಗೆ ಕೊಡುತ್ತಿದ್ದೆವು. ನಮ್ಮಜ್ಜಿ ಅವುಗಳನ್ನು ಕಪಾಟಿನಲ್ಲಿ ಜೋಪಾನವಾಗಿರಿಸಿಟ್ಟು, ಉದಾಸೀನವಾದಾಗ, ಒಂಟಿತನ ಕಾಡಿದಾಗ, ನೆಲದ ಮೇಲೆ ಹರಡಿ ನೋಡುತ್ತ ಖುಶಿಪಡುತ್ತಿದ್ದಳು. ಚಿತ್ರದ ಹಾಳೆಗಳನ್ನು ಜೋಡಿಸಿಡುತ್ತ ಈ ಚಿತ್ರ ಇಲ್ಲಿ ಬೇಡ, ಅಲ್ಲಿಡುವ ಎಂದು ಜಾಗ ಹಗರಿಸುತ್ತ ಅಲ್ಲೊಂದು ಕತೆ ಹೆಣೆಯುತ್ತಿದ್ದಳು.

ಈಗ ಕತೆ ಬರೆಯುವ ಪ್ರಕ್ರಿಯೆಯ ಬಗ್ಗೆ ಬರೆಯಲು ಹೊರಟಿರುವ ನನಗೆ ನನ್ನ ಅಜ್ಜಿಯದೇ ನೆನಪು. ಕತೆಯ ಓಘಕ್ಕೆ ಸರಿಯಾಗಿ ಯಾವ್ಯಾವುದೋ ಸಂಗತಿಗಳನ್ನು ಎಲ್ಲೆಲ್ಲಿಂದಲೋ ತರಬೇಕಾಗಬಹುದು. ಬೇರೆ ಬೇರೆ ಪಾತ್ರಗಳು ವಿಭಿನ್ನ ದಿಕ್ಕುಗಳಿಂದ ಬಂದು ಸೇರಬಹುದು ಅಥವಾ ಒಂದೇ ಪಾತ್ರದಲ್ಲಿ ಅವು ಕೇಂದ್ರೀಕರಿಸಬಹುದು. ಕತೆಯೆಂಬುದು ಹೀಗೆ 'ಕೊಲಾಜ್'ನಂತೆ ಮುಂದುವರಿಯುತ್ತದೆ.

ಆರಂಭದಲ್ಲಿ ಒಂದು ವ್ಯಕ್ತಿಚಿತ್ರವಾಗಿ ಮೂಡಿಸಲು ಹೊರಟ ಬರಹವು ಕತೆಯಾಗಿ ಬೆಳೆದುದೇ ಇತ್ತೀಚೆಗೆ ಬರೆದ ನನ್ನ ಕತೆ, 'ರೈಲುಪಟ್ಟಿಯ ಗೆರೆಗಳು'. ಚಿಕ್ಕ ಊರಿನಿಂದ ಬಂದು ಮುಂಬಯಿ ಮಹಾನಗರದಲ್ಲಿ ಆಕೆ ಪಟ್ಟ ಕಷ್ಟ, ಆತ್ಮಹತ್ಯೆಯ ಹಂತದ ವರೆಗೂ ಎದುರಿಸಿದ ಸವಾಲುಗಳು, ಅಷ್ಟಿದ್ದೂ ಧೃತಿಗೆಡದ ನಿಲುವು, ಕಂದಿಹೋಗದ ಹಾಸ್ಯಪ್ರಜ್ಞೆ – ಹೀಗೆ ಲಲಿತಾಂಬೆಯ ವ್ಯಕ್ತಿಚಿತ್ರಣವನ್ನು ಬಿಡಿಸುತ್ತ ನಡೆದಿದ್ದೆ. ಇದೊಂದು ಕತೆಯ ರೂಪವನ್ನು ಪಡೆದೀತೋ ಎಂದೂ